ಕರ್ನಾಟಕ ವಿಧಾನಸಭೆ

ಸೋಮವಾರ ದಿನಾಂಕ 12ನೇ ಫೆಬ್ರವರಿ 2007ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರಿಂದ ಧರಣಿ.

ವಿಷಯ : ಕರ್ನಾಟಕ ಬಂದ್ ಪ್ರಯುಕ್ತ ಸದನ ಮುಂದೂಡುವ ಬಗ್ಗೆ.

(ಸದನ ಆರಂಭವಾದಾಗ ಶ್ರೀ ವಾಟಾಳ್ ನಾಗರಾಜ್ ರವರು ಸನ್ಮಾನ್ಯ ಸಭಾಧ್ಯಕ್ಷರ ಪೀಠದ ಮುಂದೆ ನಿಂತುಕೊಂಡು ಮಾತಾನಾಡುತ್ತಿದ್ದರು)

ಶ್ರೀ ಹೆಚ್.ಸಿ.ಬಾಲಕೃಷ್ಣ : ವಿಶೇಷ ಸಂದರ್ಭ ಇದೆ, ಹೀಗಾಗಿ ಸದನವನ್ನು ದಯಮಾಡಿ ಮುಂದೂಡಬೇಕು.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ರವರೆ, ನೀವು ಮೊದಲು ಕುಳಿತುಕೊಳ್ಳಿ. ಈ ರೀತಿ ಮಾಡಿದರೆ ಆಗುವುದಿಲ್ಲ. ಕುಳಿತುಕೊಂಡು ಹೇಳಿ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ನಾವು ಬೆಂಬಲ ವ್ಯಕ್ತಪಡಿಸುತ್ತೇವೆ. ಇದಕ್ಕೆ ನಮ್ಮ ಒಪ್ಪಿಗೆ ಇದೆ. ಇಡೀ ರಾಜ್ಯವೇ ಹತ್ತಿಕೊಂಡು ಉರಿಯುತ್ತಿರಬೇಕಾದರೆ ಈ ಸದನ ನಡೆಸುವ ಅಗತ್ಯವಿಲ್ಲ. ದಯಮಾಡಿ ಸದನ ಮುಂದಕ್ಕೆ ಹಾಕಬೇಕು. ಇಡೀ ವಿರೋಧ ಪಕ್ಷದ ಸೀಟುಗಳು ಖಾಲಿ ಇದೆ.ಆಳುವ ಪಕ್ಷದವರು ಸುಮಾರು 5–6 ಜನ ಇಟ್ಟುಕೊಂಡು ಈ ಸಭೆ ನಡೆಸಿ, ರಾಜ್ಯದ ಜನವೇ ಒಂದು ಕಡೆ, ನಾವೇ ಒಂದು ಕಡೆ ಎನ್ನುವ ತೀರ್ಮಾನ ಏಕೆ ಮಾಡುತ್ತಿದ್ದೀರಿ? ದಯಮಾಡಿ ಸದನವನ್ನು ಮುಂದಕ್ಕೆ ಹಾಕಬೇಕು. ದಯಮಾಡಿ ಸದನವನ್ನು ಮುಂದಕ್ಕೆ ಹಾಕಲೇಬೇಕೆಂದು ಒತ್ತಾಯ ಮಾಡುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಿಯಾಮಾವಳಿ ಪ್ರಕಾರ ಕೋರಂ ಇದ್ದರೆ ಸಭೆ ನಡೆಯ ಬೇಕಾಗುತ್ತದೆ. ಬಂದ್‌ಗೆ ಸದನ ಭಾಗಿ ಎನ್ನುವ ಅಭಿಪ್ರಾಯ ಬರಬಾರದು. ನಿಯಾಮಾವಳಿ ಪ್ರಕಾರ ಸದನ ನಡೆಯಬೇಕಾಗುತ್ತದೆ. ಸದನ

ಬಂದ್‌ಗೆ ಭಾಗಿ ಎನ್ನತಕ್ಕಂಥ ಮೆಸೇಜ್ ಅನ್ನು ನಾವು ಕಳುಹಿಸಲಿಕ್ಕೆ ಹೋದರೆ ತಪ್ಪಾಗುತ್ತದೆ. ಆದುದರಿಂದ ಸದನದಲ್ಲಿ ಕೋರಂ ಇದ್ದರೆ ಸಭೆ ನಡೆಸಬೇಕೆಂದು ನನ್ನ ಅಭಿಪ್ರಾಯ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು ಯಾವಾಗಲೂ ಎಡ, ಭಾಗಿ ಅಲ್ಲ, ಸದಸ್ಯರಿಗೆ ಆಸಕ್ತಿ ಇಲ್ಲ ಎಂದ ಮೇಲೆ ಯಾರಿಗೋಸ್ಕರ ಸದನವನ್ನು ನಡೆಸುತ್ತೀರಿ? ಯಾವಾತ್ತಾದರೂ ಪ್ರತಿಪಕ್ಷ ಇಲ್ಲದೆ ಸಭೆ ನಡೆಸಿದ್ದೀರಾ? ತಾವು ದಯಮಾಡಿ ಮುಂದಕ್ಕೆ ಹಾಕಿ.

(ಗೊಂದಲ)

ಇಲ್ಲಿ ಯಾರೂ ಉತ್ತರ ಕೇಳುವುದಕ್ಕೆ ಸಿದ್ಧರಿಲ್ಲ. ದಯಮಾಡಿ ಮುಂದಕ್ಕೆ ಹಾಕಬೇಕು. ಆಳುವ ಪಕ್ಷ ಬಿಜೆಪಿ ಕೂಡ ..

(ಗೊಂದಲ)

ಸಪೋರ್ಟ್ ಇದೆ. ಅವರು ಕೂಡ ಬಂದು ಇಲ್ಲಿ ಕುಳಿತುಕೊಳ್ಳಬಾರದು.

ಶ್ರೀ ಎ.ಎಸ್.ಬಸವರಾಜು : ಸ್ವಾಮಿ ಪ್ರಮುಖವಾದಂಥ ಪ್ರಶ್ನೆಗಳಿವೆ. ಬರಗಾಲದಂಥ ಪ್ರಮುಖವಾದ ಪ್ರಶ್ನೆ ಇದೆ. ಪ್ರಶ್ನೆ ಕೇಳುವುದಕ್ಕಾಗಿ ನಾವು ಹಾಸನ ಜಿಲ್ಲೆಯ ಅರೀಸಿಕೆರೆಯಿಂದ ಬಂದಿದ್ದೇವೆ. ನೀವು ಮುಂದಕ್ಕೆ ಹಾಕಿದರೆ ಆ ಪ್ರಶ್ನೆ ಮಾಯವಾಗುತ್ತದೆ.ದಯಮಾಡಿ ಪ್ರಶ್ನೆ ಕೇಳುವುದಕ್ಕೆ ಅವಕಾಶ ಮಾಡಿಕೊಡಿ. ಬೇಕಾದರೆ ಪ್ರಶ್ನೋತ್ತರವಾದಮೇಲೆ ಮುಂದಕ್ಕೆ ಹಾಕಿ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ರಾಜ್ಯದ ಹಿತಕ್ಕಿಂತಲೂ ನಮ್ಮ ಪ್ರಶ್ನೆ ಮುಖ್ಯ ಎನ್ನಿಸಬಹುದು.

ಅಧ್ಯಕ್ಷರು : ಮಾನ್ಯ ಪ್ರಕಾಶ್‌ರವರು ಏನು ಹೇಳುತ್ತಾರೆ ಕೇಳೋಣ.

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಸಭಾಧ್ಯಕ್ಷರ ಪೀಠದ ಮುಂದೆ ನಿಂತು ಮಾತನಾಡುತ್ತಿದ್ದರು)

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು ಸಂಸದೀಯ ವ್ಯವಹಾರಗಳ ಸಚಿವರು): ತಾವು ಆ ರೀತಿಯಾಗಿ ಸಭಾಧ್ಯಕ್ಷರನ್ನು ಹೆದರಿಸಬೇಡಿ, ದಯಮಾಡಿ ಆ ರೀತಿಯಲ್ಲಿ ಮಾತನಾಡಬಾರದು. ತಾವು ತಮ್ಮ ಸೀಟಿಗೆ ಬನ್ನಿ.

(ಗೊಂದಲ)

ತಾವು ಹಿರಿಯರು. ತಾವು ದೊಡ್ಡ ಧ್ವನಿಯಲ್ಲಿ ಹೇಳಿದಿರಿ.ತಾವು ದಯವಿಟ್ಟು ತಮ್ಮ ಸೀಟಿಗೆ ಬನ್ನಿ... ನೀವು ಅಷ್ಟು ಗಟ್ಟಿಧ್ವನಿಯಲ್ಲಿ ಮಾತನಾಡತಕ್ಕಂಥದ್ದಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಎಸ್.ಎಸ್.ಪಾಟೀಲ್ : ಇಡೀ ರಾಜ್ಯ ಹತ್ತಿ ಉರಿಯುತ್ತಿರುವಾಗ .. ನಮ್ಮವರಿಗೆ ಕೆಲವರಿಗೆ ಬರಲಿಕ್ಕಾಗಿಲ್ಲ... ಹೀಗಿರುವಾಗ ನೀವು ಹೇಗೆ ಸದನ ನಡೆಸುತ್ತೀರಿ?

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ವಾಟಾಳ್‌ರವರೆ, ತಾವು ಜೋರಾಗಿ ಮಾತನಾಡತಕ್ಕಂಥ ಅಗತ್ಯ ಇದ್ದಿಲ್ಲ.

ಅಧ್ಯಕ್ಷರು : ನೀವು ಒಳಗಡೆ ಬಂದಾಗ ಒಂದು ತರಹ ಹೇಳುತ್ತೀರಿ. ಈಗ ಈ ರೀತಿ ಏಕೆ ಮಾಡುತ್ತೀರಿ?

ಶ್ರೀ ಎಸ್.ಎಸ್.ಪಾಟೀಲ್ : ನಮ್ಮವರಿಗೆ ಬರಲಿಕ್ಕೆ ಆಗಿಲ್ಲ. ನಾವು 4–5 ಜನ ಬಂದಿದ್ದೇವೆ. ಜೊತೆಗೆ ಇಡೀ ರಾಜ್ಯವೇ ಹತ್ತಿ ಉರಿಯುತ್ತಿದೆ. ವಿರೋಧ ಪಕ್ಷದ ನಾಯಕರಿಲ್ಲ, ನಾವು ಬರದೆ ವಿಧಿಯಿಲ್ಲ. ಈ ಪರಿಸ್ಥಿತಿಯಲ್ಲಿ ಸದನವನ್ನು ಹೇಗೆ ನಡೆಸುತ್ತೀರಿ? ಕೋರಂ ಆಗಿದೆ ಎನ್ನುವ ಕಾರಣಕ್ಕಾಗಿ ನಡೆಸಬೇಕಾ?

ಅಧ್ಯಕ್ಷರು : ಆಯಿತು ಬಿಡಿ. ಮಾನ್ಯ ವಾಟಾಳ್ ನಾಗರಾಜ್ ರವರೆ,ತಾವು ತಮ್ಮ ಸ್ಥಾನಕ್ಕೆ ಹೋಗಿ ಏನು ಹೇಳಬೇಕೋ ಅದನ್ನು ಹೇಳಿ.

ಶ್ರೀ ಎಸ್.ಎಸ್.ಪಾಟೀಲ್ : ಇವತ್ತು ಒಂದು ದಿವಸ ಮುಂದಕ್ಕೆ ಹಾಕಿದರೆ ಏನೂ ಆಗುವುದಿಲ್ಲ.

ಶ್ರೀ ಎ.ಎಸ್.ಬಸವರಾಜು : 9ನೇ ತಾರೀಖಿನ ದಿವಸವೇ 12ನೇ ತಾರೀಕಿನ ದಿವಸ ಸದನ ಇದೆ ಎಂದಾಗ ಇವರು ಸದನ ಬೇಡವೆಂದು ಗಲಾಟೆ ಮಾಡಬೇಕಾಗಿತ್ತು. ಬಾಯ್‌ಕಾಟ್ ಮಾಡಬೇಕಾಗಿತ್ತು. ಅವತ್ತು ಇವರು ಎಲ್ಲಿಗೆ ಹೋಗಿದ್ದರು?

ಶ್ರೀ ಎಂ.ಪಿ.ಪ್ರಕಾಶ್(ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, Business Advisory Committee ಯಲ್ಲಿ ಈ ವಿಷಯ ಪ್ರಸ್ತಾಪಿಸಲ್ಪಟ್ಟಿತು. ಇವತ್ತು ಸದನ ನಡೆಯತಕ್ಕಂಥ ಅವಶ್ಯಕತೆ ಇಲ್ಲ. ಏಕೆಂದರೆ, ಇಡೀ ಕರ್ನಾಟಕ ಬಂದ್ ಆಗುವಂಥ ಸನ್ನಿವೇಶವಿರುವುದರಿಂದ ಶಾಸಕರೂ ಕೂಡ ಆ ದಿವಸ ಭಾಗವಹಿಸುವುಕ್ಕೆ ಸಾಧ್ಯವಾಗುವುದಿಲ್ಲ. ಮತ್ತೆ ಆ ದಿವಸ ನಮಗೆ ರಕ್ಷಣೆ ಕೊಡತಕ್ಕಂಥವರು ಯಾರು? ಆದ್ದರಿಂದ ಈ ದಿನ ಸದನವನ್ನು ನಡೆಸಬಾರದೆಂಬ ಅಭಿಪ್ರಾಯಕ್ಕೆ ಮಾನ್ಯ ಮಾಧುಸ್ವಾಮಿಯವರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಬಂದರು. ಆದರೆ, ಸದನ ನಡೆಸಬೇಕಾಗುತ್ತದೆಂದು ಸರ್ಕಾರದ ಕಡೆಯಿಂದ ಹೇಳಲಾಗಿತ್ತು. ಇಲ್ಲದಿದ್ದರೆ, ಈ ಬಂದ್‌ನ್ನು ಸರ್ಕಾರವೇ ಪ್ರಸ್ತಾಪ ಮಾಡಿ ಪ್ರೋತ್ಸಾಹಿಸಿದೆ ಎಂಬ ಅಪವಾದ ಬರುತ್ತದೆ. ಆದ್ದರಿಂದ ನಾವು ಬೇರೆ ಬೇರೆ ಪರ್ಯಾಯ ಸೂಚನೆಗಳನ್ನು ಇಟ್ಟುಕೊಂಡಿರುತ್ತೇವೆ. ಹಾಗೆಯೇ, ಶಾಂತಿ ಸುವ್ಯವಸ್ಥೆ ಕಾಪಾಡಿಕೊಂಡು ಸದನವನ್ನು ನಡೆಸುತ್ತೇವೆಂದು ಹಾಗೂ ಶಾಸಕರುಗಳಿಗೂ ರಕ್ಷಣೆಯನ್ನು ಕೊಡುತ್ತೇವೆಂದು ಹೇಳಿದ್ದೇವೆ. ಇದಕ್ಕೆ ಮಾನ್ಯ ಶ್ರೀರಾಮರೆಡ್ಡಿಯವರು ಧ್ವನಿಗೂಡಿಸಿ ಸದನವನ್ನು ನಡೆಸಲೇ ಬೇಕಾಗುತ್ತದೆಂಬ ಅಭಿಪ್ರಾಯವನ್ನು ವ್ಯಕ್ತಮಾಡಿದ್ದರು. ಇದರ ಬಗ್ಗೆ ನಾನು ಸರ್ಕಾರದ ಜೊತೆಗೆ ಯೋಚನೆ ಮಾಡಿ ನಿರ್ಧಾರ ಮಾಡುತ್ತೇನೆಂದು ಹೇಳಿದ್ದಕ್ಕೆ ಅವರೆಲ್ಲರೂ ಕೂಡ ಒಪ್ಪಿಕೊಂಡರು. ಮತ್ತೆ Business Advisory Committee ಯಲ್ಲಿ ಪ್ರಸ್ತಾಪವಾಗಿದ್ದಂಥ ಮತ್ತೊಂದು ವಿಷಯ ಏನೆಂದರೆ, ಈಗಾಗಲೇ ಅಧಿವೇಶನದ ಅವಧಿ ಮೂರು ದಿವಸ ಕಳೆದು ಹೋಗಿದೆ. ಆದ್ದರಿಂದ 15ನೇ ತಾರೀಖಿನ ದಿವಸ ಅಧಿವೇಶನವನ್ನು ಮುಕ್ತಾಯಗೊಳಿಸುವುದು ಸರಿಯಲ್ಲ. ಇನ್ನೂ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಮಾಡಬೇಕಾಗಿರತಕ್ಕಂಥದ್ದು ಹಾಗೂ

ಬರಗಾಲದ ಬಗ್ಗೆ ಚರ್ಚೆ ಮಾಡತಕ್ಕಂಥದ್ದುಮತ್ತು ಅರ್ಧ ಗಂಟೆ ವಿಷಯಗಳು ಪ್ರಸ್ತಾಪ ಮಾಡತಕ್ಕಂಥದ್ದು ಸುಮಾರು ಇರುವುದರಿಂದ ಕನಿಷ್ಠ ಇನ್ನೂ ಮೂರು ದಿವಸ ಸದನವನ್ನು ಮುಂದುವರಿಸಬೇಕೆಂಬ ವಿಷಯ ಕೂಡ ಪ್ರಸ್ತಾಪಿಸಲ್ಪಟ್ಟಿತು. ಮೂರು ದಿವಸ ನಡೆಸುವುದಕ್ಕೆ ಕಷ್ಟವಾಗುತ್ತದೆಂದು ನಾವು ಆಗ ಅದಕ್ಕೆ ಒಪ್ಪಿಗೆ ಕೊಡಲಿಲ್ಲ.ಕೊನೆಗೆ ಏನು ಹೇಳಿದೆಂದರೆ, ಇವತ್ತಿನ ಈ ಸಭೆಗೆ ಮಾನ್ಯ ಮುಖ್ಯಮಂತ್ರಿಗಳು ಬಂದಿಲ್ಲ. ಆದ್ದರಿಂದ ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ಮಾಡಿ ನಾವು ಒಪ್ಪಿಗೆ ಕೊಡುತ್ತೇವೆಂದು ಹಾಗೂ ಈ ವಿಷಯವನ್ನು Business Advisory Committeeಗೆ ತಿಳಿಸುತ್ತೇವೆಂಬ ಮಾತನ್ನು ಸಹ ಹೇಳಿದ್ದೆವು. ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿದಾಗ, ಈ ವಿಷಯವನ್ನು Business Advisory Committeeಯಲ್ಲಿ ಹೇಳೋಣ. ಹಾಗೆಯೇ 16ನೇ ತಾರೀಖಿನ ದಿವಸ ಶಿವರಾತ್ರಿ ಇರುವುದರಿಂದ ಮತ್ತೆ 19ನೇ ತಾರೀಖಿನ ದಿವಸ ಸದನ ಕರೆದು 20, 21 ನೇ ತಾರೀಖಿನವರೆಗೆ ನಡೆಸುವುದರ ಬಗ್ಗೆ ವಿರೋಧ ಪಕ್ಷದವರ ಸಲಹೆಯನ್ನೂ ಕೂಡ ನಾವು ಸ್ವೀಕಾರ ಮಾಡೋಣವೆಂದು ಮಾನ್ಯ ಮುಖ್ಯಮಂತ್ರಿಯವರು ಸಹಮತವನ್ನು ವ್ಯಕ್ತಪಡಿಸಿದ್ದಾರೆ. ನಾಳೆ ದಿವಸ Business Advisory Committee ಕರೆದಾಗ ಈ ವಿಷಯದಲ್ಲಿ ಅವರ ಅಭಿಪ್ರಾಯವನ್ನು ಸರ್ಕಾರದ ಪರವಾಗಿ ನಾವು ಒತ್ತಾಯ ಮಾಡುತ್ತೇವೆ. ಸದನವನ್ನು ಮತ್ತೆ ಮೂರು ದಿವಸ ಮುಂದುವರಿಸುವುದಕ್ಕೆ ನಮ್ಮದೇನು ತಕರಾರೂ ಕೂಡ ಇಲ್ಲ. ಈ ಸನ್ನಿವೇಶದಲ್ಲಿ ಕನಿಷ್ಠ ಪಕ್ಷ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಂದು ಚರ್ಚೆ ಮಾಡಬಹುದಾಗಿದೆ. ಪ್ರಶ್ನೋತ್ತರ ವೇಳೆ ಇಲ್ಲಿಯವರೆಗೆ ಬಹಳಷ್ಟು ಆಗಿಲ್ಲ. ಆ ಕಾರಣಕ್ಕಾಗಿಯೇ ಸಭೆಯನ್ನು ನಡೆಸೋಣ. ತಾವು ಇದಕ್ಕೆ ಬೆಂಬಲ ಕೊಟ್ಟಿಲ್ಲ ಎನ್ನತಕ್ಕಂಥ ಪ್ರಶ್ನೆ ಇಲ್ಲ. ಕರ್ನಾಟಕಕ್ಕೆ ಅನ್ಯಾಯವಾಗಿರತಕ್ಕಂಥದರ ಬಗ್ಗೆ ನಾವು ಪರ್ಯಾಯವಾಗಿರತಕ್ಕಂಥ ಅವಕಾಶಗಳನ್ನು ಉಪಯೋಗಿಸಬೇಕೆಂದು ಸರ್ವಪಕ್ಷಗಳ ಸಭೆಯನ್ನು ಕರೆಯಲಾಗಿತ್ತು. ಸರ್ವಪಕ್ಷಗಳ ಸಲಹೆ ಮತ್ತು ಆಧಾರದ ಮೇಲೆಯೇ ಸಾವಿರ ಪುಟಗಳ ತೀರ್ಪನ್ನು ಅವರಿಗೆಲ್ಲಾ ಕೊಡಿಸಲಾಗಿದೆ. ಅವರ ಸಲಹೆ ಸೂಚನೆಗಳು

ಮತ್ತು ತಂತ್ರಜ್ಞಾನರ ಸಲಹೆ ಮತ್ತು ತಂತ್ರಜ್ಞಾನರ ಸಲಹೆ ಸೂಚನೆಗಳು ಹಾಗೂ ಸರ್ಕಾರಿ ವಕೀಲರಲ್ಲದೆ ಬೇರೆ ಕಾನೂನು ತಜ್ಞರು ಕೊಟ್ಟಂಥ ಸಲಹೆ ಮೇರೆಗೆ ನಾವು ಮೂರ್ನಾಲ್ಕು ಅಭಿಪ್ರಾಯಗಳನ್ನು ಇಟ್ಟುಕೊಂಡಿದ್ದೇವೆ. ಅವುಗಳು ಯಾವುವೆಂದರೆ, ಸುಪ್ರೀಂ ಕೋರ್ಟ್‌ಗೆ ಹೋಗಿ ವಿಚಾರಗಳನ್ನು ತಿಳಿದುಕೊಳ್ಳತಕ್ಕಂಥದ್ದು ಮತ್ತೆ ಈಗ ಇರತಕ್ಕಂಥ ಟ್ರಿಬ್ಯುನಲ್‌ನಲ್ಲಿ ಅಂತರ್‌ರಾಜ್ಯ ನದಿ ವಿವಾಧಗಳಿಗೆ ಸಂಬಂಧಪಟ್ಟಂತಹ ಕಲಂ 5(3)ರ ಕೆಳಗೆ ಸ್ಪಷ್ಟೀಕರಣ ಅರ್ಜಿಯನ್ನು ಹಾಕತಕ್ಕಂಥದ್ದು ಮತ್ತೆ ಮೂರನೆಯದು ಏನೆಂದರೆ, ಅಲ್ಲಿರತಕ್ಕಂಥ ರೈತರ ಜೊತೆ ಸಮಾಲೋಚನೆ ಅಥವಾ ಕೇಂದ್ರ ಸರ್ಕಾರ ಇದರಲ್ಲಿ ಪಾಲ್ಗೊಳ್ಳುವ ವಿಚಾರದ ಬಗ್ಗೆ ಕೂಡ ಚರ್ಚೆ ಮಾಡಬೇಕೆಂದು ಹೇಳಿದ್ದೇವೆ. ಸರ್ವಪಕ್ಷದ ಸಭೆಯಲ್ಲಿ ಮುಖಂಡರು ಕೊಡುವ ಒಟ್ಟು ಅಭಿಪ್ರಾಯದ ಮೇಲೆ ಸರ್ಕಾರ ತನ್ನ ಮುಂದಿನ ಕಾರ್ಯರೂಪವನ್ನು ಮಾಡುತ್ತದೆ. ಇದರ ಜೊತೆಗೆ ಇವತ್ತಿನ ದಿವಸ ರಾಜ್ಯದ ಜನತೆಯನ್ನು ಹಾಗೂ ಎಲ್ಲಾ ಮುಖಂಡರನ್ನು ಅಭಿನಂದಿಸಬೇಕಾಗಿದೆ. ಏಕೆಂದರೆ, ಅವರು ಬಹಳ ಶಾಂತಿಯುತವಾಗಿ ಇದನ್ನು ನಡೆಸಿಕೊಡತಕ್ಕಂಥ ಸನ್ನಿವೇಶ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಸಹ ಇದರ ಬಗ್ಗೆ ಕೇಳಿದರು. ನಿಮಗೆಲ್ಲರಿಗೂ ರಕ್ಷಣೆ ಇದೆ. ಆದ್ದರಿಂದ, ಇವತ್ತು ಅಧಿವೇಶನ ನಡೆಯುತ್ತದೆ. ತಾವೆಲ್ಲರೂ ದಯವಿಟ್ಟು ಬರಬೇಕೆಂದು ನಾನು ಹೇಳಿದ್ದೇನೆ. ಹಾಗಾದರೆ, ಬರುತ್ತೇನೆಂಬ ಮಾತನ್ನು ಅವರು ಹೇಳಿದರು. ಆದರೆ, ನಾನು ಬರುವ ವೇಳೆಗೆ ಅವರು ನನ್ನ ಫೋನ್‌ಗೆ ಸಿಗಲಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನನಗೆ ಫೋನ್ ಮಾಡಿದಾಗ ಶಾಂತಿಯುತವಾಗಿದೆ ತಾವೆಲ್ಲರೂ ಭಾಗವಹಿಸಬಹುದು, ತಮಗೂ ಕೂಡ ರಕ್ಷಣೆಯ ಬೆಂಗಾವಲು ಪಡೆ ಇದೆ. ಆದ್ದರಿಂದ ತಾವು ಬರಬೇಕೆಂಬ ಮೆಸೇಜ್ ಅನ್ನು ನಾನು ಅವರ ಮನೆಗೆ ಮುಟ್ಟಿಸಿದ್ದೇನೆ. ಈಗ ಈ ಸನ್ನಿವೇಶದಲ್ಲಿ ಕೋರಂ ಇದೆ. ನಡವಳಿಕೆಗಳ ಪ್ರಕಾರ ಕೋರಂ ಇದ್ದಾಗ ಅಧಿವೇಶನವನ್ನು ನಡೆಸಬೇಕಾಗುತ್ತದೆ. ಆದ್ದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ....

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಈ ವಿಷಯದ ಬಗ್ಗೆ ಬೆಂಕಿ ಹತ್ತಿ ಉರಿಯುತ್ತಿದೆ.

ಅಧ್ಯಕ್ಷರು: ಅವರು ಏನು ಹೇಳುತ್ತಾರೆಂಬುದನ್ನು ಮೊದಲು ಕೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ನಾನು ಹೇಳುವುದನ್ನು ಮೊದಲು ಕೇಳಿ. ಸದನವನ್ನು ಇವತ್ತು ನಡೆಸಬೇಕೆಂಬ ಇಚ್ಛೆ ನಿಮಗೆ ಇದ್ದರೆ ನಡೆಸಿಕೊಂಡು ಹೋಗಿ. ಈ ಪ್ರಶ್ನೋತ್ತರ ವೇಳೆಗೆ ನಾನಂತೂ ಭಾಗವಹಿಸುವುದಿಲ್ಲ. ಇಡೀ ರಾಜ್ಯದ ಜನತೆ ನಿಮ್ಮನು ನೋಡಿ ನಾಳೆ ದಿವಸ ನಿಮ್ಮನು ಶಪಿಸುತ್ತಾರೆ. ಈ ರಾಜ್ಯಕ್ಕೆ ಬೆಂಕಿ ಬಿದ್ದಿದೆ, ಕನ್ನಡಿಗರಿಗೆ ಅನ್ಯಾಯವಾಗಿದೆ. 5ನೇ ತಾರೀಖಿನ ದಿವಸ ಜಡ್ಜ್‌ಮೆಂಟ್ ಬಂದಿದೆ. ಇವತ್ತು 11ನೇ ತಾರೀಖು ಆಗಿದ್ದರೂ ಇದರ ಬಗ್ಗೆ ನಾವೇನು ತೀರ್ಮಾನ ತೆಗೆದುಕೊಂಡಿಲ್ಲ. ಆ ತೀರ್ಮಾನವನ್ನು ಈ ಸದನ ತೆಗೆದುಕೊಳ್ಳದೇ ಬೇರೆ ವಿಚಾರ ಮತ್ತು ಪ್ರಶ್ನೋತ್ತರ ವೇಳೆ ಬೇಡವೇ ಬೇಡ. ನಿಮ್ಮ ಪ್ರಶ್ನೆಗಳ ಪಟ್ಟಿಯನ್ನು ಹರಿದು ಬಿಸಾಕಿ ಈ ಸದನದಿಂದ ಹೊರಗಡೆ ಹೋಗುತ್ತೇನೆ. ನಿಮ್ಮ ಸದನವನ್ನು ನಡೆಸಿ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಶ್ನೋತ್ತರ ಪಟ್ಟಿಯನ್ನು ಹರಿದು ಹಾಕಿ ಸದನದಿಂದ ಹೊರಗಡೆ ಹೋದರು)

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಅದೇ ಭಾಗದಿಂದ ಬಂದವರು. ದಯವಿಟ್ಟು ಸದನವನ್ನು ಮುಂದಕ್ಕೆ ಹಾಕಿ. ಮಾನ್ಯ ಪ್ರಕಾಶ್‌ರವರೆ, ಇದರ ಬಗ್ಗೆ ತಾವೂ ಕೂಡ ದಯವಿಟ್ಟು ನಿರ್ಣಯ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು: ಇರಲಿ, ಎಲ್ಲರ ಅಭಿಪ್ರಾಯವನ್ನುಕೇಳೋಣ.

ಶ್ರೀ ಸಿ.ರಾಜೇಂದ್ರವರ್ಮಾ: ಮಾನ್ಯ ಅಧ್ಯಕ್ಷರೆ, ಸದನವನ್ನು ಮುಂದಾಕಿ ಎಂಬ ವಿಚಾರ ಇದ್ದಾಗ ಏನು ಮಾಡಬೇಕಾಗುತ್ತದೆ? ಇಡೀ ರಾಜ್ಯದಲ್ಲಿ ಈ ರೀತಿಯಾದ ಒಂದು ದೊಡ್ಡ ಗಂಡಾಂತರ ಇರುವಾಗ..

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ರಾಜ್ಯದ ಹಿತಾಸಕ್ತಿಗೆ ಮತ್ತು ರಾಜ್ಯದ ಜನತೆಗೆ ಒಳ್ಳೆಯದಾಗಲೆಂದು ಶಾಸನ ಮಾಡುವುದಕ್ಕೆ ರಚನೆಯಾಗಿರತಕ್ಕಂಥ ಶಾಸನ ಸಭೆ ಇದು. ಇಡೀ ರಾಜ್ಯಕ್ಕೆ ಅನ್ಯಾಯವಾಗಿ ಇವತ್ತಿನ ದಿವಸ ಇಡೀ ರಾಜ್ಯದಲ್ಲಿ ಹತ್ತಿ ಉರಿಯುತ್ತಿರುವಾಗ ನಾವು ಇಲ್ಲಿ ಕುಳಿತುಕೊಂಡು ಪಿಟೀಲ್ ಬಾರಿಸತಕ್ಕಂಥದರಲ್ಲಿ ಏನರ್ಥವಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ತಾಂತ್ರಿಕತೆಗೋಸ್ಕರ ಸದನ ನಡಸಲೇ ಬೇಕೆಂದು ಸದನ ನಡೆಸತಕ್ಕಂಥದು ಮತ್ತು ಇಡೀ ರಾಜ್ಯಕ್ಕೆ ಅನ್ಯಾಯವಾಗಿರುವಾಗ ನಾವು ಸದನ ನಡೆಸುತ್ತೇವೆಂದು ಹಠ ಮಾಡತಕ್ಕಂಥ ನಿಮ್ಮ ಧೋರಣೆಯನ್ನು ವಿರೋಧಿಸಿ ನಾನೂ ಕೂಡ ಸದನದಿಂದ ಹೊರಕ್ಕೆ ಹೋಗುತ್ತೇನೆ.

(ಈ ಹಂತದಲ್ಲಿ ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಸದನದಿಂದ ಹೊರಕ್ಕೆ ಹೋದರು)

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಸದನವನ್ನು ಒಂದು ದಿವಸ ಮುಂದಕ್ಕೆ ಹಾಕಿದರೆ ಏನು ಅನಾಹುತವಾಗುವುದಿಲ್ಲ. ಸರ್ಕಾರದ ಬೆಂಬಲ ಇದಕ್ಕೆ ಇದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದರ ಬಗ್ಗೆ ಸ್ಪಷ್ಟೀಕರಣ ಮಾಡಬೇಕು. ಇದಕ್ಕೆ ನಮ್ಮ ಬೆಂಬಲ ಇಲ್ಲ, ಆದ್ದರಿಂದ ಸದನವನ್ನು ನಡೆಸುತ್ತೇವೆಂದು ಹೇಳಿಬಿಡಿ. ತಾವು ಈ ರೀತಿಯಾಗಿ ಮಾಡುತ್ತಿರುವುದು ದಯವಿಟ್ಟು ಸರಿಯಲ್ಲ.

(ಗೊಂದಲ)

ಶ್ರೀ ಸಿ. ರಾಜೇಂದ್ರವರ್ಮಾ: ನಾವು ಹೆಡ್‌ಕ್ವಾರ್ಟರ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ.ಪಿ.ವೆಂಕಟೇಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರೆಲ್ಲರೂ ಎಲ್ಲಿಗೆ ಹೋಗಿದ್ದಾರೆ? ವಿರೋಧಪಕ್ಷದ ನಾಯಕರು ಇಲ್ಲಿಗೆ ಬಂದು ಹೇಳಬೇಕಾಗಿತ್ತು.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್: ನಿಮ್ಮ ಪಕ್ಷದವರು ಮತ್ತು ಎಲ್ಲಾ ಪಕ್ಷದವರೂ ಕೂಡ ಭಾಗವಹಿಸಿದ್ದಾರೆ...

(ಗೊಂದಲ)

ಶ್ರೀ ಎಂ.ಪಿ.ವೆಂಕಟೇಶ್: ಮುಂದಿನ ಬೆಂಚ್‌ನಲ್ಲಿ ಕುಳಿತುಕೊಳ್ಳುವಂಥ ವಿರೋಧಪಕ್ಷದ ದೊಡ್ಡ ದೊಡ್ಡ ಲೀಡರ್‌ಗಳು ಸದನಕ್ಕೆ ಬಂದು ಸದನವನ್ನು ಮುಂದೂಡಿ ಎಂದು ಹೇಳಬೇಕಾಗಿತ್ತು. ವಿರೋಧಪಕ್ಷದ ನಾಯಕರು ಮತ್ತು ಕಾಂಗ್ರೆಸ್ ಲೀಡರ್‌ಗಳೆಲ್ಲರೂ ಎಲ್ಲಿಗೆ ಹೋದರು ಹೇಳಿ? ಎಲ್ಲರೂ ಇಲ್ಲಿಗೆ ಬಂದಿದ್ದಾರೆಯೇ?

ಶ್ರೀ ಎಸ್.ಎಸ್. ಪಾಟೀಲ್: ಏಕೆ ಇದನ್ನು ಪ್ರತಿಷ್ಠೆ ಮಾಡಿಕೊಳ್ಳುತ್ತೀರಿ?

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಅವರೂ ಕೂಡ ಸಹಕರಿಸಬೇಕು. ಇದಕ್ಕೆ ವಿರೋಧಪಕ್ಷದ ನಾಯಕರೂ ಕೂಡ ಸಹಕಾರ ಕೊಟ್ಟಿದ್ದಾರೆ. ಆದ್ದರಿಂದ ಅದು ನಿಮ್ಮ ಪಕ್ಷದ ನಿರ್ಣಯ ಕೂಡ ಆಗಿದೆ. ಆದ್ದರಿಂದ ನಾನು ಈಗ ತಮಗೆ ಕೇಳುವುದೇನೆಂದರೆ, ನಿಮ್ಮ ಕಾಂಗ್ರೆಸ್ ಪಕ್ಷದ ಬೆಂಬಲ ಅದಕ್ಕೆ ಇದೆಯೇ? ವಿರೋಧಪಕ್ಷದ ನಾಯಕರು ಮತ್ತು ಹಿರಿಯರಾದಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು Business Advisory Committee ಯಲ್ಲಿ ಭಾಗವಹಿಸಿ ಸದನವನ್ನು ಮುಂದುವರಿಸಬೇಕೆಂಬ ಅಭಿಪ್ರಾಯವನ್ನು ಸಹ ಅವರುಗಳು ಕೊಟ್ಟಿದ್ದಾರೆ. ಇವತ್ತಿನ ದಿವಸ ಅವರು ಬಾರದೇ ಇರತಕ್ಕಂಥದ್ದು ಬೇರೆ ವಿಷಯ, ಅದಕ್ಕೆ ನಾವೇನು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದು ಪ್ರತಿಷ್ಠೆಯಲ್ಲ. ನಿಮ್ಮಷ್ಟೆ ಕಳಕಳಿ ನನಗೂ ಕೂಡ ಇದೆ. ಈಗ ಪ್ರಶ್ನೋತ್ತರ ನಡೆಯುವುದಕ್ಕೆ ದಯವಿಟ್ಟು ಅವಕಾಶ ಕೊಡಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಪ್ರಕಾಶ್‌ರವರೆ, ಸದನದಲ್ಲಿ ಯಾರು ಇಲ್ಲದೇ ಇರುವಾಗ ಸದನವನ್ನು ಹೇಗೆ ನಡೆಸುತ್ತೀರಿ? ಇದು ಸರಿಯಲ್ಲ. ನೀವು ಹಿರಿಯರು ಇವತ್ತಿನ ದಿವಸ ರಾಜ್ಯದಲ್ಲಿ ಬೆಂಕಿ ಹತ್ತಿ ಉರಿಯುತ್ತಿದೆ. ಇದಕ್ಕೆ ನಿಮ್ಮ ಸಪೋರ್ಟ್ ಕೂಡ ಇದೆ. ಆದರೆ, ಏನೊಂದು ಉದ್ದೇಶವಿಟ್ಟುಕೊಂಡು ಸದನ ನಡೆಸುವುದಕ್ಕೆ ಹೊರಟಿದ್ದೀರಿ. ಸಭೆಯಲ್ಲಿ ಯಾರು ಇಲ್ಲ, ಆದರೂ ಕೂಡ ತಾವು

ಸಭೆ ನಡೆಸುತ್ತಿದ್ದೀರಿ. ಇದನ್ನು ವಿರೋಧಪಡಿಸಿ ನಾನೂ ಕೂಡ ಸಭೆಯಿಂದ ಹೊರಕ್ಕೆ ಹೋಗುತ್ತೇನೆ.

(ಈ ಹಂತದಲ್ಲಿ ಮಾನ್ಯ ಎಸ್.ಎಸ್.ಪಾಟೀಲ್‌ರವರು ಸಭೆಯಿಂದ ಹೊರಕ್ಕೆ ಹೋದರು)

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ನೀವು ಒಬ್ಬರು ಬಂದು ಹೇಳಿದರೆ ಆಗುತ್ತದೆಯೇ? ವಿರೋಧಪಕ್ಷದ ನಾಯಕರು ಎಲ್ಲಿಗೆ ಹೋದರು?

ಶ್ರೀ ಜೆ.ಎ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾವು ಸರ್ವಪಕ್ಷಗಳ ಸಭೆ ಸೇರಿದಂಥ ಸಂದರ್ಭದಲ್ಲಿ ಒಂದು ಸ್ಪಷ್ಟವಾದ ಅಭಿಪ್ರಾಯಕ್ಕೆ ಬಂದಿದ್ದೇವೆ. ಅದೇನೆಂದರೆ, ತೀರ್ಪನ್ನು ಎಲ್ಲರೂ ಸಂಪೂರ್ಣವಾಗಿ ಓದಿದ ಮೇಲೆ ಒಂದು ಅಭಿಪ್ರಾಯಕ್ಕೆ ಬರಬೇಕು, ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿದ್ದರೆ ಪುನರ್ ಪರಿಶೀಲನಾ ಅರ್ಜಿಯನ್ನು ಹಾಕಬೇಕೆಂದು ಹಾಗೂ ತೀರ್ಪನ್ನು ಆಳವಾಗಿ ಅಧ್ಯಯನ ಮಾಡಿದ ನಂತರ ನಾವೆಲ್ಲರೂ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕೆಂದು ಸರ್ವಪಕ್ಷಗಳ ಸಭೆಯಲ್ಲಿ ತೀರ್ಮಾನವಾಗಿದೆ. ಅದಕ್ಕೆ ಎಲ್ಲರೂ ಕೂಡ ಭಾಗಿಯಾಗಿರತಕ್ಕಂಥ ಕಾರಣಕ್ಕೋಸ್ಕರ ಆ ತೀರ್ಮಾನಕ್ಕೆ ಗೌರವ ಕೊಡಬೇಕಾಗುತ್ತದೆ. ಎರಡನೆಯದು ಏನೆಂದರೆ, ಬಂದ್‌ಗೆ ಸರ್ಕಾರ ಬೆಂಬಲ ಕೊಡುತ್ತದೆಯೋ ಅಥವಾ ಬಿಡುತ್ತದೆಯೋ ಅದು ಅವರಿಗೆ ಬಿಟ್ಟಂಥ ವಿಚಾರ. ಅದನ್ನು ನಾವು ಹೇಳುವುದಕ್ಕೆ ಬರುವುದಿಲ್ಲ. ಆದರೆ, ಈ ಸದನ ಬಂದ್‌ಗೆ ಭಾಗಿ ಎನ್ನತಕ್ಕಂಥ ತಪ್ಪು ಸಂಕೇತಗಳನ್ನು ನಾವು ನ್ಯಾಯಾಂಗಕ್ಕೆ ಕಳುಹಿಸುವುದಕ್ಕೆ ಆಗುವುದಿಲ್ಲ, ಇದು ಸ್ಪಷ್ಟ. ಏಕೆಂದರೆ, ನಾವು ಫೆಡರಲ್ ಸಿಸ್ಟಮ್‌ನಲ್ಲಿದ್ದೇವೆ. ಆದ್ದರಿಂದ, ಈ ಸಂದರ್ಭದಲ್ಲಿ ಸದನ ಭಾಗಿಯಾಗತಕ್ಕಂಥದ್ದು ನಿಯಮಾವಳಿ ಪ್ರಕಾರ ಸರಿಯಲ್ಲ ಎನ್ನತಕ್ಕಂಥದ್ದು ನನ್ನ ಸ್ಪಷ್ಟ ಅಭಿಪ್ರಾಯ. ಆವೊತ್ತು Business Advisory Committeeಯಲ್ಲಿ ಈ ವಿಷಯವನ್ನು ಹೇಳಿದ್ದೇನೆ. ಮತ್ತೆ ಇವತ್ತೂ ಕೂಡ ಇದನ್ನೇ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯಕ್ಕೆ ಅನ್ಯಾಯ ಮತ್ತು ತೊಂದರೆಯಾದರೆ ಸುಮ್ಮನಿರಬೇಕೆಂದು ನಾವ್ಯಾರು ಹೇಳುತ್ತಿಲ್ಲ. ನಮ್ಮ ಪ್ರಯತ್ನ ಏನೆಂದರೆ,

ಕಾನೂನಿನ ಚೌಕಟ್ಟಿನೊಳಗೆ ಏನೆಲ್ಲಾ ಮಾಡಿ ಕರ್ನಾಟಕದ ಹಿತಾಸಕ್ತಿಯನ್ನು ಕಾಪಾಡಬೇಕಾಗಿದೆಯೋ ಆ ಕೆಲಸವನ್ನು ಮಾಡಬೇಕಾಗುತ್ತದೆ. ಮತ್ತೆ ಇದು ಎಲ್ಲರ ಜವಾಬ್ದಾರಿ ಕೂಡ ಆಗಿದೆ. ಆದರೆ, ಈ ಸದನ ಭಾಗಿಯಾಗತಕ್ಕಂಥದ್ದು ನಾಳೆ ದಿವಸ ಕೆಟ್ಟ ಸಂಪ್ರದಾಯವಾಗುತ್ತದೆ. ಹಾಗೆಯೇ, ನ್ಯಾಯಾಂಗಕ್ಕೆ ತಪ್ಪು ಸಂದೇಶಗಳನ್ನು ಕಳುಹಿಸಿದಂತಾಗುತ್ತದೆ. ಆದ್ದರಿಂದ ಇದಕ್ಕೆ ನೀವು ಭಾಗಿಯಾಗುವುದಾದರೆ ನಮ್ಮದೇನು ಅಭ್ಯಂತರವಿಲ್ಲ.

ಶ್ರೀ ರಾಮಚಂದ್ರೇಗೌಡ (ಸಣ್ಣ ಉಳಿತಾಯ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ): ಮಾನ್ಯ ಅಧ್ಯಕ್ಷರೆ, ಈ ರಾಷ್ಟ್ರದ ಸರ್ವೋನ್ನತ ನ್ಯಾಯಾಲಯ ಕೂಡ ಒಂದು ತೀರ್ಪು ಕೊಟ್ಟಿದೆ. ಅದೇನೆಂದರೆ, ಬಂದ್ ಅನ್ನು ಕರೆಯಬಾರದು, ಬಂದ್‌ನ್ನು ಕರೆಯುವುದರಿಂದ ತೊಂದರೆಯಾಗುತ್ತದೆಂದು ಹೇಳಿದೆ. ಇವತ್ತು ಬಂದ್ ಕರೆಯುವುದಕ್ಕೆ ನಮ್ಮದೇನು ವಿರೋಧವಿಲ್ಲ. ಆದರೆ, ಇದಕ್ಕೆ ಸರ್ಕಾರದ ಬೆಂಬಲ ಇಲ್ಲ. ಆದರೆ, ಇದು ಅವರ ಸ್ವಯಂ ಬಂದ್ ಆಗಿದೆ. ಈ ರಾಜ್ಯದ 5 ಕೋಟಿ ಜನರು ಸಂಪೂರ್ಣವಾಗಿ ಬಂದ್ ಕರೆದಿದ್ದಾರೆ. ಅವರೂ ಕರೆದಿರತಕ್ಕಂಥ ವಿಚಾರ ಸರಿಯಾಗಿದೆ. ಆ ವಿಚಾರಕ್ಕೆ ನಮ್ಮ ಬೆಂಬಲವಿದೆಯೇ ವಿನ: ಬಂದ್‌ನ್ನು ನಾವು ಕರೆದಿಲ್ಲ. ಬಂದ್‌ನ್ನು ಅವರು ಕರೆದಿದ್ದಾರೆ. ಅವರು ಬಂದ್ ಕರೆದಿರುವ ಬಗ್ಗೆ ಕೇಂದ್ರ ಸರ್ಕಾರವೇ ಆಗಲಿ, ಮತ್ತೆ tribunal ಆಗಲಿ ಇದನ್ನು ಅರ್ಥಮಾಡಿಕೊಳ್ಳಬೇಕು ಎಂಬಂತಹ ಅಂಶದಿಂದ ಕರೆದಿದ್ದಾರೆ. ಅವರ ಜೊತೆಯಲ್ಲಿ ನಮ್ಮ ಸಹಾನುಭೂತಿ ಇದೆ. ರಾಜ್ಯ ಸರ್ಕಾರವು ಕೂಡ ಈ ತೀರ್ಪಿನ ವಿರುದ್ಧವೇ ಇದ್ದೇವೆ. ಆದರೆ ಬಂದಿರುವಂತಹ 5 volumeಗಳನ್ನು ಸ್ಪಷ್ಟವಾಗಿ ಓದಿ, ಅದರಲ್ಲಿರುವಂತಹ ಎಲ್ಲ ಅಂಶಗಳನ್ನು ತಿಳಿದುಕೊಂಡು ನಾವು ಏನು ನಿರ್ಣಯವನ್ನು ಮಾಡಬೇಕು. ಅದಕ್ಕೋಸ್ಕರವಾಗಿ ಸನ್ಮಾನ್ಯ ರೆಡ್ಡಿಯವರು ಹೇಳಿದಹಾಗೆ ಇದಕ್ಕೆ ಕಾಲಾವಕಾಶ ಅವಶ್ಯಕತೆ ಇದೆ. ಅದಕ್ಕಾಗಿ ನಾವು ಇದ್ದೇವೆ. ಈಗ ಸಭೆಯನ್ನು ನಡೆಸಿ ಪ್ರಶ್ನೋತ್ತರಗಳನ್ನು ಮುಗಿಸಿಕೊಂಡು .....

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಬಂದ್‌ಗೆ ವಿರೋಧವನ್ನು ವ್ಯಕ್ತಪಡಿಸುವಂತಹ ಅವಶ್ಯಕತೆಯಲ್ಲ. ಅದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಸದನವು ಅದಕ್ಕೆ ಭಾಗಿಯಾಗಬಾರದು ಎನ್ನುವಂತಹ ಪ್ರಶ್ನೆ ಅಷ್ಟೆ ಇರುವಂತಹದ್ದು.

ಡಾ. ಕೆ. ಅನ್ನದಾನಿ (ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ಈ ದಿನದ ಸದನಕ್ಕೆ ನಾವು ಎಷ್ಟು ಕಷ್ಟಪಟ್ಟು ಬಂದಿದ್ದೇವೆ ಶಾಸಕರು ಎಂದು ನಿಮಗೆ ಹೇಳಿದರೆ ಬಹುಶ: ಆಶ್ಚರ್ಯವಾಗಬಹುದು. ಬೆಳಗಿನ ಜಾವ 4–00, 4–30 ಗಂಟೆಗೆ ಊರನ್ನು ಬಿಟ್ಟು, ಸ್ನಾನ ಮಾಡದೆ ಬೆಳಗಿನ ಜಾವ ಆದರೆ ಎಲ್ಲಿ ನಮ್ಮನ್ನು ರೋಡ್‌ನಲ್ಲಿ ಅಡ್ಡಹಾಕುತ್ತಾರೆಂದು ಕಷ್ಟಪಟ್ಟು ಸದನಕ್ಕೆ ಬಂದಿದ್ದೇವೆ. ತಾವು ಶುಕ್ರವಾರ ಸದನ ಮುಂದುವರಿಯುತ್ತದೆಂದು ನಮಗೆ ತಿಳಿಸಿದ್ದೀರಿ. ಈಗ ಮಂತ್ರಿಗಳಿಗೆ Escort ಇದೆ ಪೊಲೀಸ್‌ನವರು ಇದ್ದಾರೆ ಹೇಗೋ ಕಷ್ಟಪಟ್ಟು ಬಂದುಬಿಡುತ್ತಾರೆ. ಈಗ ನಮ್ಮ ಸ್ಥಿತಿಯನ್ನು ಕೇಳುವವರು ಯಾರು? ಸದನವು ನಡೆಯುತ್ತದೆಂದು ನಮ್ಮನ್ನು ಕರೆದಿದ್ದೀರಿ, ನಾವೆಲ್ಲರೂ ಕೂಡ ಬಂದಿದ್ದೇವೆ. ಅದರ ಜೊತೆಗೆ ಸಂಪೂರ್ಣವಾಗಿ ನಮ್ಮ ಮಾನ್ಯ ಗೃಹ ಸಚಿವರು ಏತಕ್ಕಾಗಿ ಇವತ್ತು ಸದನವನ್ನು ನಡೆಸುತ್ತಿದ್ದೇವೆ. ಏತಕ್ಕಾಗಿ ಸದನವನ್ನು ನಡೆಸಬೇಕೆಂದು ಸ್ಪಷ್ಟವಾದ ವಿಚಾರವನ್ನು ಸದನಕ್ಕೆ ತಿಳಿಸಿದ್ದಾರೆ. ಇವತ್ತು ಸರ್ಕಾರ ಸಂಪೂರ್ಣವಾಗಿ ಆ ತೀರ್ಪನ್ನು ವಿರೋಧ ಮಾಡುವುದರ ನಡುವೆ ಇವತ್ತು ಬಂದ್‌ನ್ನು ಕನ್ನಡಪರ ಸಂಘಟನೆಗಳು ಕರೆದಿರುವುದರಿಂದ ಸರ್ಕಾರ ಈ ಬಂದ್‌ನ್ನು ಕರೆಯದೆ ಇರುವುದು ಇದು ಎಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಶಾಸಕರು, ನಾವು ಬಹಳ ಕಷ್ಟಪಟ್ಟು ಬಂದಿದ್ದೇವೆ ಇದನ್ನೂ ತಾವು ಅರ್ಥಮಾಡಿಕೊಳ್ಳುತ್ತೀರೆಂದು ಬಯಸಿ ಈಗ ಸದನವನ್ನು ನಡೆಸುವುದು ಸೂಕ್ತವೆಂದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಮಹಿಮಾ ಪಟೇಲ್ (ಚನ್ನಗಿರಿ): ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧಪಕ್ಷದ ಕೆಲವು ನಾಯಕರು ಮೊನ್ನೆ ಮಾತನಾಡುತ್ತಾ joint responsibility ಯ ಬಗ್ಗೆ ಮಾತನಾಡುತ್ತಿದ್ದರು. ಯಾವುದೇ ಒಂದು ಆಡಳಿತ ಪಕ್ಷ ಅದರಲ್ಲಿರುವ ಮಂತ್ರಿಗಳು, ಶಾಸಕರೆಲ್ಲರಿಗೂ joint responsibility ಇರಬೇಕೆಂದು. ನನ್ನ ದೃಷ್ಟಿಯಲ್ಲಿ joint responsibility ಎಂದರೆ ಬರೀ ಆಡಳಿತ

ಪಕ್ಷದಲ್ಲಿರುವವರಿಗೆ ಮಾತ್ರವಲ್ಲ, ಪೂರ್ತಿ ಸದನಕ್ಕೆ ಈ ರಾಜ್ಯದ ಬಗ್ಗೆ joint responsibility ಇರುತ್ತದೆ. ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಮಾತನ್ನು ನಾನು ಎತ್ತಿಹಿಡಿಯುತ್ತೇನೆ. ಈ ಸದನವು ಸಂಪೂರ್ಣ ಬಂದ್‌ನಲ್ಲಿ ಭಾಗಿಯಾಗುವುದು ಏನಿದೆ, ಅದು ಸರಿಯಾದ ಕ್ರಮವಲ್ಲ. ಆದರೆ ನಾವು ಕೂಡ ಈ ರಾಜ್ಯದ ಜನತೆಯ ಅವರ ಭಾವನೆಗಳು ಏನಿವೆ, ಅದಕ್ಕೆ ನಾವು ಸ್ಪಂದಿಸಬೇಕಾದುದು, ಅವರ ಜೊತೆಗೆ ನಿಲ್ಲಬೇಕಾದುದು ಅದು ನಮ್ಮ ಕರ್ತವ್ಯ. ಏಕೆಂದರೆ ನಾವು ಅವರೆಲ್ಲರ ಪ್ರತಿನಿಧಿಗಳಾಗಿರುವುದರಿಂದ ಅವರ ಜೊತೆ ನಿಲ್ಲಬೇಕಾಗುತ್ತದೆ. ಇವತ್ತು ನಾವು ಸದನವನ್ನು ಕರೆದಿರುವುದು ಏನಿದೆ, ಇದು ಬಹಳ ಸೂಕ್ತವಾದ ಕ್ರಮವಾಗಿದೆ. ಇದರ ಜೊತೆಗೆ ಜನರ ಭಾವನೆಗಳಿಗೆ ಸ್ಪಂದಿಸಿ, ನಾವು ಮತ್ತೆ ಸದನವನ್ನು ನಾಳೆಗೆ ಮುಂದಕ್ಕೆ ಹಾಕಬಹುದು ಎನ್ನುವುದು ನನ್ನ ವೈಯಕ್ತಿಕವಾದ ಅಭಿಪ್ರಾಯವಾಗಿದೆ. ನನಗೆ ಮಾತನಾಡುವುದ್ದಕ್ಕೆ ಅವಕಾಶ ಮಾಡಿಕೊಟ್ಟಿದಕ್ಕಾಗಿ ತಮಗೆ ವಂದನೆಗಳು.

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಅಧ್ಯಕ್ಷರೆ, ನಿಜವಾಗಿಯೂ ಕೂಡ ಇವತ್ತು ನೀವು ಕಾನೂನು ಚೌಕಟ್ಟಿನೊಳಗಡೆ ಸದನವನ್ನು ನಡೆಸಬೇಕು ಎಂದು ನಿಮ್ಮ ಅಭಿಪ್ರಾಯವಿರಬಹುದು. ಆದರೆ ಇಡೀ ಐದೂವರೇ ಕೋಟಿ ಜನರು ತಮಗೆ ಆಗಿರುವ ಅನ್ಯಾಯವನ್ನು ಬಂದ್‌ನ ಮೂಲಕ ವ್ಯಕ್ತಪಡಿಸುತ್ತಿರುವಂತಹ ಸಮಯದಲ್ಲಿ ಕಾನೂನು ಚೌಕಟ್ಟು ಒಂದು ಕಡೆ ಇದ್ದರೂ ಕೂಡ ತಾವು ಈ ಸದನವನ್ನು ಇವತ್ತಿಗೆ ಮುಂದೂಡಿ ನಾಳೆ ಹಾಕಿದರೆ ತಪ್ಪಾಗುವುದಿಲ್ಲವೆಂದು ನನ್ನ ಭಾವನೆಯನ್ನು ವ್ಯಕ್ತಪಡಿಸಿ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ಧನ್ಯವಾದಗಳನ್ನು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಚಂದ್ರಣ್ಣ (ದೇವನಹಳ್ಳಿ): ಮಾನ್ಯ ಅಧ್ಯಕ್ಷರೆ, ಏನು ಕಾನೂನು ಚೌಕಟ್ಟಿನಲ್ಲಿ ಸದನವನ್ನು ನಡೆಸುವ ಬಗ್ಗೆ ತಾವು ಏನು ಅಂದುಕೊಂಡಿದ್ದೀರಿ, ಅದು ಸರಿಯಾದ ಕ್ರಮವಾಗಿದೆ. ಅದಕ್ಕೆ ನಮ್ಮೆಲ್ಲರ ಸ್ವಾಗತವಿದೆ. ಆದರೆ ಹೊರಗಡೆ ಇರುವ ಐದೂವರೆ ಕೋಟಿ ಜನರು ಇದಕ್ಕೆ ಸಂಪೂರ್ಣವಾಗಿ ಬಂದ್‌ನ್ನು ಆಚರಣೆ ಮಾಡಿರುವುದು, ಇದರ ಜೊತೆಗೆ ನಾವು ಬಂದು ಇಲ್ಲಿಗೆ

ಸೇರಬೇಕಾದರೆ, ಇದರ ಬಗ್ಗೆ ಮಾನ್ಯ ಸದಸ್ಯರಾದ ಅನ್ನದಾನಿಯವರು ಏನು ಹೇಳಿದರೂ ನಿಜವಾಗಿಯೂ ಸಹ ವಸ್ತುಸ್ಥಿತಿ ಅದು ಸರಿಯಾಗಿದೆ. ಆ ರೀತಿಯಲ್ಲಿ ನಾವು ಇಲ್ಲಿಗೆ ಬಂದು ಸೇರಿದ್ದೇವೆ. ಅದಕ್ಕೋಸ್ಕರ ತಾವು ಏನು ಸದನವನ್ನು ಕರೆದಿದ್ದೀರಿ, ಆ ವಿಚಾರದಲ್ಲಿ ಯಾರದು ತಪ್ಪು ಅಭಿಪ್ರಾಯವಿಲ್ಲ. ಇದರ ಬಗ್ಗೆ ಸ್ವಾಗತವಿದೆ, ಆದರೆ ಅದನ್ನು ಕಾನೂನಿನ ಚೌಕಟ್ಟಿನಲ್ಲಿಟ್ಟುಕೊಂಡು ಸದನವನ್ನು ತಾವು ಮುಂದೂಡಿದರೆ ಒಳ್ಳೆಯದು ಎಂದು ನನ್ನ ಭಾವನೆಯನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎ.ಎಸ್.ಬಸವರಾಜು(ಅರಸೀಕೆರೆ): ಮಾನ್ಯ ಅಧ್ಯಕ್ಷರೆ,ಇಲ್ಲಿಗೆ ಇವತ್ತು ಕಷ್ಟಪಟ್ಟು ಬಂದಿದ್ದೇನೆ. ಆದರೆ ಇವತ್ತಿನ ದಿವಸ ಕಳೆದ ತಿಂಗಳು 29ನೇ ತಾರೀಖು ಸದನವನ್ನು ಮುಂದೂಡಿದ್ದೀರಿ, ಹಾಗೆಯೇ 31ನೇ ತಾರೀಖು ಕೂಡ ಸದನವನ್ನು ಮುಂದೂಡಿದ್ದೀರಿ. ಆದರೆ ಇವತ್ತಿನದಿವಸ 9ನೇ ತಾರೀಖು ಸದನವು ನಡೆಯಬೇಕಾದರೆ, 12ನೇ ತಾರೀಖು ಸದನ ಇದೆ ಎಂದು ಹೇಳಿದ್ದೀರಿ. ಆ ದೃಷ್ಟಿಯಿಂದ ನಾವು ಹೇಳುತ್ತಿದ್ದೇನೆ. ಏಕೆಂದರೆ, ನಮ್ಮ ಪ್ರಶ್ನೆಗಳು ಬಂದಿವೆ. ಅನೇಕ ಪ್ರಶ್ನೆಗಳು ಮಾಯವಾಗುತ್ತವೆ. ಸದನವನ್ನು ಮುಂದಕ್ಕೆ ಹಾಕಿದಾಗ ನಮ್ಮ ಪ್ರಶ್ನೆಗಳು ಬರುವುದಿಲ್ಲ. ಆ ಪ್ರಶ್ನೆಯನ್ನು ಏನಾದರೂ ಮಾಡಿ, ಪ್ರಶ್ನೋತ್ತರವನ್ನು ತೆಗೆದುಕೊಂಡು ಬೇಕಾದರೆ ಸದನವನ್ನು ಮುಂದಕ್ಕೆ ಹಾಕಬಹುದು, ಇಲ್ಲವೆ ನಡೆಸಬಹುದು ಅದು ನಿಮ್ಮ ಇಚ್ಚೆಗೆ ಬಿಟ್ಟಿರುವಂತಹದ್ದು.

ಶ್ರೀ ಎಸ್.ಬಾಲರಾಜ್(ಕೊಳ್ಳೇಗಾಲ): ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಯಾವ ವಾತಾವರಣವಿದೆ ಎನ್ನುವುದನ್ನು ನಾವು ಮಾಧ್ಯಮಗಳ ಮುಖಾಂತರ ನೋಡುತ್ತಿದ್ದೇವೆ. ಬೆಳಿಗ್ಗೆ ನಾನು ಟಿ.ವಿ.9 ಚಾನಲ್‌ನ್ನು ನೋಡುವಂತಹ ಸಂದರ್ಭದಲ್ಲಿ ಅಲ್ಲಿ ಯಾವ ಹೋರಾಟಗಾರರು ಮತ್ತು ಚಳುವಳಿಗಾರರು ನುಗ್ಗಿದ್ದಾರೆ. ಅವರೆಲ್ಲರಿಗೂ ಪೊಲೀಸ್‌ನವರು ಮಾಡತಕ್ಕಂತಹ ದಂಡನೆ ಅದನ್ನು ನೋಡುತ್ತಿದ್ದರೆ, ಬಹುಶ: ಕನ್ನಡಿಗರು ನೋಡತಕ್ಕಂತಹ ಎಲ್ಲರಿಗೂ ನಮ್ಮ ಹೃದಯದಲ್ಲಿ ಈ ಕನ್ನಡನಾಡಿನ ಜನರ ಬಗ್ಗೆ ಒಂದು ಗೌರವವನ್ನು ಹುಟ್ಟುವಂತಹ ಒಂದು ಘಟನೆಗಳನ್ನು ನಾನು ನೋಡಿದೆ. ಬಹುಶ: ನನ್ನ ಜೀವನದಲ್ಲಿ ಅನೇಕ ಚಳುವಳಿಗಳನ್ನು ನಾವು

ನೋಡಿದ್ದೇವೆ. ಆದರೆ ಕಾವೇರಿ ನೀರಿಗಾಗಿ ನಡೆಯುವಂತಹ ಚಳುವಳಿ ಇಡೀ ರಾಜ್ಯದಲ್ಲಿ ನಮ್ಮ ಮನೆಯ ಮಕ್ಕಳಿಗೆ ಆಗುವಂತಹ ಅವಮಾನವೆನ್ನುವಂತಹ ರೀತಿಯಲ್ಲಿ ಅಂತಹ ಘಟನೆಗಳು ಇವತ್ತು ನಡೆಯುತ್ತಿದೆ. ಇದರ ಬಗ್ಗೆ ನಮಗೆಲ್ಲರಿಗೂ ಅರ್ಥವಾಗಿದೆ. ಈಗ ಏನು ಕೊಟ್ಟಿರುವಂತಹ ತೀರ್ಮ ಏನಿದೆ, ತೀರ್ಪಿನ ವರದಿಗಳು ಇರಬಹುದು, ಸಂಬಂಧಪಟ್ಟವುಗಳು ಇರುವುದನ್ನು ನಾವು ನೋಡಬಹುದು. ಅದಕ್ಕಾಗಿ ತಜ್ಞರು ಇದ್ದಾರೆ, ತಿಳುವಳಿಕೆ ಇರುವವರು ಬಹಳಷ್ಟು ಜನರು ಇದ್ದಾರೆ. ಆದರೆ ಮೇಲ್ನೋಟಕ್ಕೆ ಬಂದಿರುವಂತಹ ಅಂತಿಮ ವರದಿಯಲ್ಲಿ ಕೊಟ್ಟಿರುವಂತಹ ಕೆಲವು ಅಂಶಗಳನ್ನು ನೋಡಿದಾಗ ನಮಗೆ ಅನ್ಯಾಯವಾಗಿರುವುದು ಸ್ಪಷ್ಟವಾಗಿರುತ್ತದೆ. ಈ ರೀತಿಯಾಗಿ ಅನ್ಯಾಯವಾಗಿರುವಂತಹ ಸಂದರ್ಭದಲ್ಲಿ ಸದನವನ್ನು ತಾವು ಕಾನೂನಿನ ಚೌಕಟ್ಟಿನಲ್ಲಿ ಕರೆದಿದ್ದೀರಿ, ಅದಕ್ಕೆ ನಮಗೆ ಸ್ವಾಗತವಿದೆ, ನಾವು ಬಂದು ಭಾಗವಹಿಸಿದ್ದೇವೆ.ನಾನೇನು ಬಹಳ ಕಷ್ಟಪಟ್ಟು ಏನು ಬಂದಿಲ್ಲ, ನಾನು ನಿನ್ನೆ ರಾತ್ರಿಯೇ ಬಂದಿದ್ದೇನೆ. ಆದರೆ ಈ ಒಂದು ಸದನದಲ್ಲಿ ಭಾಗವಹಿಸುವಂತಹಸಂದರ್ಭದಲ್ಲಿ ನಮಗೆ ಅನಿಸುತ್ತದೆ, ನೋವು ಸಹ ಇದೆ, ಹೊರಗಡೆ ಜನರು ಕಷ್ಟಪಟ್ಟು ಬೀದಿಯಲ್ಲಿ ಹೋರಾಟ ಮಾಡಿಕೊಂಡು ತಮ್ಮ ಪ್ರಾಣವನ್ನು ಲೆಕ್ಕಿಸದೆ ಹೋರಾಡುವಂತಹ ಜನರು, ನಮ್ಮ ನಾಡಿನ ಜನರು, ನಾಳೆಯೇ ದಿವಸ ಯಾರಿಗೆ ತೊಂದರೆಯಾದರೂ ಅದಕ್ಕೆ ರಕ್ಷಣೆ ಕೊಡಬೇಕಾದಂತಹ ಜವಾಬ್ದಾರಿ ಸರ್ಕಾರದ ಮೇಲೆ ಇದೆ. ಇದಕ್ಕೆ ನಮ್ಮೆಲ್ಲರ ಜವಾಬ್ದಾರಿ ಇದೆ. ಶಾಸನಸಭೆಗಳಲ್ಲಿ ನಾವೆಲ್ಲರೂ ಮಾತನಾಡುವಾಗ, ಅವರ ಕಷ್ಟಕಾರ್ಪಣ್ಯಗಳನ್ನು ಮತ್ತು ನಾಡಿನ ನೆಲ, ಜಲದ ಬಗ್ಗೆ ಹಾಗೂ ನುಡಿಯ ರಕ್ಷಣೆಗೋಸ್ಕರ ನಾವು ಇವತ್ತು ನಮ್ಮ ರಾಜ್ಯದ ಒಳಿತಿಗಾಗಿ ಈ ಸದನದಲ್ಲಿ ಭಾಗಿಯಾಗಿದ್ದೇವೆ. ಈಗ ಅವರೆಲ್ಲರೂ ಸಂಕಷ್ಟದಲ್ಲಿ ಸಿಕ್ಕಿರುವಂತಹ ಸಂದರ್ಭದಲ್ಲಿ ನಾವು ಅವರಿಗೆ ಬೆಂಬಲವನ್ನು ನೀಡದೆ ಇದ್ದರೆ ನಾವು ಕಾನೂನಿನ ಚೌಕಟ್ಟಿನ ಪ್ರಕಾರ ಇಲ್ಲಿಗೆ ಬಂದು ಭಾಗವಹಿಸಿದ್ದೇವೆ. ಆದರೆ ಸದನವನ್ನು ಮುಂದೂಡುವುದಕ್ಕೆ ತೊಂದರೆ ಏನು ಇಲ್ಲ. ನಾವು ಅಂತಹ ಸಂದರ್ಭ ಬಂದರೆ ನಾವು ಕೂಡ ನೀವು ಸದನವನ್ನು ಮುಂದೂಡದೆ ಇದ್ದರೆ

ನಾನು ಕೂಡ ಸಭಾತ್ಯಾಗ ಮಾಡಿ ಹೊರಗಡೆ ಹೋಗುತ್ತೇನೆ. ನಮಗೆ ನಾಡಿನ ಜನರ ಬಗ್ಗೆ ನಾವು ಕಾಳಜಿಯನ್ನು ವಹಿಸಬೇಕಾಗುತ್ತದೆ. ಅವರಿಗೆ ರಕ್ಷಣೆಯನ್ನು ಕೋಡಬೇಕಾದುದು ನಮ್ಮ ಜವಾಬ್ದಾರಿಯಾಗಿದೆ. ತಾವು ದಯವಿಟ್ಟು ದೊಡ್ಡ ಮನಸ್ಸು ಮಾಡಿ ಸದನವನ್ನು ಮುಂದೂಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಶ್ರೀನಿವಾಸ (ಮಂಡ್ಯ): ಮಾನ್ಯ ಅಧ್ಯಕ್ಷರೆ, ನಾನು ಮಧ್ಯರಾತ್ರಿಯಿಂದಲೆ ಕನ್ನಡಪರ ಸಂಘಟನೆಗಳು ಈ ಬಂದ್‌ನ ಯಶಸ್ವಿಗೋಸ್ಕರ ಹೋರಾಟವನ್ನು ಮಾಡುತ್ತಿರುವುದನ್ನು ನಾವು ಟಿ.ವಿ. ಮಾಧ್ಯಮದ ಮುಖಾಂತರ ನೋಡಿದ್ದೇವೆ. ಈಗಾಗಲೇ ಕರ್ನಾಟಕದ ಕೋಟ್ಯಾಂತರ ಜನರು ಈಗಾಗಲೇ ಕರ್ನಾಟಕದ ಕೋಟ್ಯಾಂತರ ಜನರು ಬಹಳ ಅಹಿಂಸಾತ್ಮಕವಾಗಿ ಬೀದಿಬೀದಿಗಳಲ್ಲಿ ಚಳುವಳಿಯನ್ನು ಮಾಡುತ್ತಾ ರಸ್ತೆ ರೋಕೋ ಮಾಡುವ ಸಮಯದಲ್ಲಿ ಪ್ರಯಾಣಿಕರಿಗೆ ಊಟದ ಸೌಲಭ್ಯವನ್ನು ಕೊಟ್ಟು ಬಹಳ ಸುಲಲಿತವಾಗಿ ಚಳುವಳಿಯನ್ನು ಮಾಡುತ್ತಿದ್ದಾರೆ. ಇಂತಹ ಕೋಟ್ಯಾಂತರ ಜನರು ಬೀದಿಗೆ ಇಳಿದು ಚಳುವಳಿಯನ್ನು ಮಾಡುತ್ತಿರುವಾಗ ಒಂದು ತಾತ್ವಿಕ ವ್ಯವಸ್ಥೆಗೋಸ್ಕರ ಆ ಜನತೆಯನ್ನು ಧಿಕ್ಕರಿಸಿ ಇಲ್ಲಿ ಸಭೆಯನ್ನು ನಡೆಸುವುದು ಒಳ್ಳೆಯದಲ್ಲವೆಂದು ನನ್ನ ಭಾವನೆಯಾಗಿದೆ. ಈ ದಿನ ದಯಮಾಡಿ ಮಾನ್ಯ ಸಭಾಧ್ಯಕ್ಷರು ಸಭೆಯನ್ನು ಮುಂದೂಡುವುದರ ಮುಖಾಂತರ ಕನ್ನಡಿಗರ ಈ ಹೋರಾಟದಲ್ಲಿ ಈ ಶಾಸಕರ ಬೆಂಬಲವನ್ನು ನಿರಂತರವಾಗಿದೆ ಎನ್ನುವುದನ್ನು ಸಾಭೀತುಪಡಿಸಲು ದಯಮಾಡಿ ಸದನವನ್ನು ಮುಂದೂಡಿ ಎಂದು ನಾನು ಸಭೆಯನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು): ಮಾನ್ಯ ಅಧ್ಯಕ್ಷರೆ, ಇವತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವೆಲ್ಲರೂ ಕೂಡ ಇವತ್ತಿನ ಸದನವನ್ನು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸೇರಿದ್ದೇವೆಂದು ನಾನಾದರೂ ಕೂಡ ಭಾವಿಸಿಕೊಂಡಿದ್ದೇನೆ. ಏಕೆಂದರೆ, ಪ್ರಜಾಪ್ರಭುತ್ವದಲ್ಲಿ ಕಾನೂನು ಮತ್ತು ಕಟ್ಟಳೆಗಳು ಎಲ್ಲವೂ ಕೂಡ ಜನರಿಗೋಸ್ಕರವೇ ಕಾನೂನು ಹೊರತು, ಕಾನೂನಿಗೋಸ್ಕರ ಜನತೆ ಅಲ್ಲ. ಇವತ್ತು ಕರ್ನಾಟಕ ರಾಜ್ಯದಲ್ಲಿ ನಾವು ಅಪ್ಪರ್

ಭಾಗದಲ್ಲಿದ್ದುಕೊಂಡು ನೀರನ್ನು ಬಿಡತಕ್ಕಂತಹ ವ್ಯವಸ್ಥೆ 1985ನೇ ಇಸವಿಯಿಂದಲೂ ಕೂಡ ನಮಗೆ ಅನ್ಯಾಯವಾಗುತ್ತಿದೆ. ಇವತ್ತು ಹಾಗೂ ನಾಳೆ ನ್ಯಾಯ ಸಿಗುತ್ತದೆಂದು ಕಾದಿದ್ದೆವು. ಆದರೆ ಮೊನ್ನೆ ಬಂದಂತಹ ತೀರ್ಪನ್ನು ನೋಡಿದಾಗ ಇದು ಕರ್ನಾಟಕಕ್ಕೆ ಅನ್ಯಾಯದ ಪರಮಾವಧಿಯಾಗಿದೆ ಎಂಬುವುದನ್ನು ನಾವು ನೋಡುತ್ತಿದ್ದೇವೆ. ಕನ್ನಡದ ಜನತೆ ನೆಲ, ಜಲದ ಬಗ್ಗೆ ಕಾಳಜಿ ಇರತಕ್ಕಂತಹವರು ಮತ್ತು ಶಾಂತಿಪ್ರಿಯರಾಗಿದ್ದಾರೆ. ಈ ರೀತಿ ಶಾಂತಿಪ್ರಿಯರಾಗಿರುವುದರಿಂದ ಇವತ್ತು ಶಾಂತವಾಗಿಯೇ ಪ್ರತಿಭಟನೆ ನಡೆಯುತ್ತಿದೆ. ಬಂದ್ ನಡೆಯುತ್ತಿದೆ. ಇದೇರೀತಿಯ ತೀರ್ಪಿನಲ್ಲಿ ವ್ಯತಿರಿಕ್ತವಾಗಿ ತಮಿಳುನಾಡಿಗೆ ಬಂದಿದ್ದರೆ ಇಷ್ಟೊತ್ತಿಗೆ ತಮಿಳುನಾಡಿನವರು ಬೆಂಕಿ ಹಚ್ಚಿ ಇಡೀ ಮದ್ರಾಸ್‌ನಲ್ಲಿ ನೂರಾರು ಜನರು ಹೆಣವಾಗುತ್ತಿದ್ದರು, ಆಸ್ತಿಗೆ ಮತ್ತು ಪ್ರಾಣಕ್ಕೆ ಹಾನಿಯಾಗುತ್ತಿತ್ತು. ಆದರೆ ಕನ್ನಡ ಜನತೆ ಬಹಳ ಶಾಂತಿಪ್ರಿಯರಾಗಿದ್ದಾರೆ, ಸಹಿಷ್ಣುತೆಯಿಂದ ವಿದ್ಯಾವಂತರಾಗಿದ್ದಾರೆ. ಆದ್ದರಿಂದ ಅವರಿಗೆ ಬೆಂಬಲ ನೀಡುವಂಥದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದ್ದರೂ ಕೂಡ ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಈ ಸದನವನ್ನು ನಡೆಸಬೇಕಾದುದು ನಮ್ಮ ಆದ್ಯ ಕರ್ತವ್ಯವಾಗಿರುವುದರಿಂದ, ಹಾಗೆಂದು ಈ ಸದನವನ್ನು ನಡೆಸಿದ ಮಾತ್ರಕ್ಕೆ ಈ ತೀರ್ಪಿನ ಪರವಾಗಿದ್ದೇವೆಂಬ ಭಾವನೆ ಬರತಕ್ಕಂಥದ್ದು ಸರಿಯಲ್ಲ. ನಾವು ಈ ತೀರ್ಪಿನ ವಿರುದ್ಧವಾಗಿದ್ದೇವೆ, ಜನರ ಪರವಾಗಿದ್ದೇವೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಆದರೆ ಆ ತೀರ್ಪನ್ನು ಕಂಪ್ಲೀಟ್ ಆಗಿ ಓದಿ ಆ ತಿರುಳನ್ನು ತಿಳಿದುಕೊಂಡು ನಂತರ ಸರ್ವ ಪಕ್ಷಗಳ ಸಭೆಯನ್ನು ಕರೆದು ನಂತರ ತೀರ್ಮಾನ ತೆಗೆದುಕೊಳ್ಳುವ ಉದ್ದೇಶವಿರುವ ಈ ಸಂದರ್ಭದಲ್ಲಿ ಶಾಂತಿಯುತವಾಗಿ ಮಹಾ ಜನತೆ ಆಚರಿಸುತ್ತಿರುವ ಈ ಬಂದ್‌ಗೆ ಬೆಂಬಲ ಸೂಚಿಸುವಂಥಾದ್ದು ಪರೋಕ್ಷವಾಗಿ ಅಥವಾ ಪ್ರತ್ಯಕ್ಷವಾಗಿ ನಾವು ತೋರಿಸಬೇಕಾದುದು ನಮ್ಮ ಆದ್ಯ ಕರ್ತವ್ಯವೆಂದು ಹೇಳಿ ಈ ಸದನದ ಕರ್ತವ್ಯ ಕೂಡ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಸುತ್ತೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೇ, ನಾನೇನು ಕಷ್ಟಪಟ್ಟು ಬರಲಿಲ್ಲ, ಪ್ರತಿ ಸಲ ಬರುವ ಹಾಗೆ ನಿನ್ನೆ ನೈಟ್ ಬಸ್‌ನಲ್ಲಿ

ಪ್ರಯಾಣಿಸಿ ಬೆಳಿಗ್ಗೆ ಇಲ್ಲಿಗೆ ಬಂದು ತಲುಪಿದೆ. ಆದರೆ ಎಲ್ಲರೂ ಮಾತನಾಡಿದ ಮೇಲೆ ನನ್ನ ಅಭಿಪ್ರಾಯ ಹೇಳುವಂಥದ್ದು. ಶಾಸನ ಸಭೆಯ ಸದಸ್ಯರುಗಳ ಅಭಿಪ್ರಾಯ ಒಂದಾಗುತ್ತದೆ. ತಮ್ಮದೊಂದು ಅಭಿಪ್ರಾಯ ಆಗುತ್ತದೆ. ಏಕೆಂದರೆ ತಾವು ಸದನವನ್ನು ಮುಂದೂಡಲಿಕ್ಕೆ ಕಷ್ಟವಾಗುತ್ತದೆ. ಅದಕ್ಕೋಸ್ಕರ ನಾವು ಮೊನ್ನೆ ಸೇರಿ ಶಾಸಕಾಂಗ ಇದಕ್ಕೆ ಭಾಗಿಯಾಗಬಾರದೆಂಬ ನಿಟ್ಟಿನಲ್ಲಿ ಹೇಳಿದ್ದೇವೆ. ಸದನವನ್ನು ತಾವು ಮುಂದೂಡಲಿಕ್ಕಾಗುವುದಿಲ್ಲ. ಬಂದ್‌ಗೆ ಬೆಂಬಲವನ್ನು ವ್ಯಕ್ತಪಡಿಸಲಿಕ್ಕಾಗುವುದಿಲ್ಲ. ಹಾಗೆಯೇ ಸದಸ್ಯರನ್ನು ಬಂದ್‌ನಲ್ಲಿ ಭಾಗಿಯಾಗಬಾರದೆಂದು ನಿರ್ಬಂಧವನ್ನು ಹೇರಲಿಕ್ಕಾಗುವುದಿಲ್ಲ. ಅವರವರ ಅಭಿಪ್ರಾಯವದು. ಏಕೆಂದರೆ ಕಾವೇರಿ ಟ್ರಿಬ್ಯುನಲ್‌ನ ತೀರ್ಪಿನಿಂದ ರಾಜ್ಯಕ್ಕೆ ಅನ್ಯಾಯವಾಗಿದೆ ಎಂಬುದು ಎಲ್ಲರ ಒಂದೇ ಅಭಿಪ್ರಾಯ. ಆದರೆ ಸರ್ಕಾರ ಬಂದ್‌ನ ಪರವಿಲ್ಲ ಎಂಬುದಕ್ಕೆ ಮಾನ್ಯ ಸಚಿವರು ಸರ್ಕಾರ ಪರವಿದೆ ಎಂದು ಈಗಲೇ ಹೇಳಿಕೆಯನ್ನು ಕೊಟ್ಟುಬಿಟ್ಟರು. ಸರ್ಕಾರದ ಬೆಂಬಲವನ್ನು ಸೂಚಿಸುವಂಥಾದ್ದು ಬೇರೆ. ಆದರೆ ಸದನದಲ್ಲಿ ಈಗ ಏನು ಮಂತ್ರಿಗಳು ನಾವು ಸಹ ಬೆಂಬಲವನ್ನು ವ್ಯಕ್ತಪಡಿಸುತ್ತೇವೆಂದು ಹೇಳುತ್ತಾರೆ, ಹಾಗೆ ಹೇಳಿದಾಗ ಸರ್ಕಾರ ಬೆಂಬಲವನ್ನು ವ್ಯಕ್ತಪಡಿಸಿದಂತಾಗುತ್ತದೆ. – ದಯವಿಟ್ಟು ನಾನು ಮಾತನಾಡುತ್ತೇನೆ. ನೀವು ಮಾತನಾಡಿದ್ದಕ್ಕೆ ಬೇರೆ ಅರ್ಥವೇ ಬರುವುದಿಲ್ಲ.

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು): ಜನಕ್ಕೋಸ್ಕರ ಕಾನೂನು ಇದೆ. ಕಾನೂನಿಗಾಗಿ ಜನವಿಲ್ಲವೆಂದು ಹೇಳಿದ್ದು. ಜನತೆಯ ಹಿತದೃಷ್ಟಿಗೋಸ್ಕರ ಎಂದು ಹೇಳಿದ್ದು. ನಾನು ಹಾಗೆ ಮಾತನಾಡಲಿಲ್ಲ. ಜನತೆಗೆ ನಾವು ಬೆಂಬಲಕೊಡುತ್ತೇವೆಂದು ---

ಶ್ರೀ ಜೆ.ವಿ.ಶ್ರೀರಾಮರೆಡ್ಡಿ: ಸದನದಲ್ಲಿ ಒಬ್ಬ ಕ್ಯಾಬಿನೆಟ್ ಮಂತ್ರಿಗಳಾಗಿದ್ದುಕೊಂಡು ಬಂದ್‌ಗೆ ಬೆಂಬಲವಿದೆಯೆಂದು ನೀವು ಹೇಳುತ್ತಿದ್ದರೆ ಅದು ಸರ್ಕಾರದ ಹೇಳಿಕೆಯೆಂದು ಇಲ್ಲಿ ಪರಿಗಣನೆಯಾಗುತ್ತದೆ. ಅದು ವೈಯಕ್ತಿಕವಾಗಿ ಮಾನ್ಯ ಜಯಕುಮಾರ್‌ರವರ ಅಭಿಪ್ರಾಯವಾಗುವುದಿಲ್ಲ. ದಯವಿಟ್ಟು ಕ್ಷಮಿಸಬೇಕು ಅಧ್ಯಕ್ಷರೇ.

ಅಧ್ಯಕ್ಷರು: ಆಯಿತು, ಬಿಡಿ.

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಎಂ.ಪಿ. ಪ್ರಕಾಶ್‌ರವರು ಈಗಾಗಲೇ ಸದನದಲ್ಲಿ ಆ ಬಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಬೆಂಬಲ ನೀಡಬೇಕಾದ ಈ ಸಂದರ್ಭದಲ್ಲಿ ಸರ್ಕಾರ ತಮ್ಮದೇ ಒಂದು ನಿಲುವನ್ನು ವ್ಯಕ್ತಪಡಿಸಬೇಕೆಂದು ಹೇಳಿದ್ದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಎಂ.ಪಿ.ಪ್ರಕಾಶ್‌ರವರು ಹೇಳಿದ್ದು ಬೇರೆ. ನೀವು ಹೇಳಿದ್ದು ಬೇರೆ. ಹಾಗಾದರೆ ನಿಮ್ಮ ಮಂತ್ರಿಮಂಡಲದಲ್ಲಿ ಗೊಂದಲವಿದೆಯೆಂದು ಸ್ಪಷ್ಟವಾಗುತ್ತದೆ.

ಅಧ್ಯಕ್ಷರು: ಆಯಿತು, ಆಯಿತು, ಜಯಪ್ರಕಾಶ್ ಹೆಗ್ಡೆಯವರೆ, ಮಾತನಾಡಿ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಈಗ ಹೆಚ್ಚಿನ ಸದಸ್ಯರೆಲ್ಲರೂ ಕೋರಂ ಇಲ್ಲವೆಂದು ಈ ಸದನವನ್ನು ಮುಂದೂಡಬೇಕೆಂದು ಹೇಳಿದಾಗ ತಾವು ಈ ಸದನವನ್ನು ಮುಂದೂಡಲೇಬೇಕಾಗುತ್ತದೆ. ಆದರೆ ತಾವು ಈ ಸದನವನ್ನು ಮುಂದೂಡಲಿಕ್ಕೆ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ನಿಯಮಗಳ ಪ್ರಕಾರ ಸದನವನ್ನು ಮುಂದೂಡಲಿಕ್ಕೆ ಸಾಧ್ಯವಾಗುವುದಿಲ್ಲ. ಹಾಗಾಗಿ ಸದಸ್ಯರ ತೀರ್ಮಾನವನ್ನು ತೆಗೆದುಕೊಂಡು ಕೋರಂ ಇಲ್ಲವೆಂದು ಸದನವನ್ನು ತಾವು ನೇರವಾಗಿ ಮುಂದೂಡಲೇಬೇಕಾಗುತ್ತದೆ ಇದನ್ನು ಬಿಟ್ಟರೆ ತಾವು ಸದನವನ್ನು ಮುಂದೂಡುವಂತಹ ಸಂಪ್ರದಾಯ ಇಲ್ಲಿಯವರೆಗೆ ಆಗಿಲ್ಲ. ಹಾಗಾಗಿ ಆ ಹೊಸ ಸಂಪ್ರದಾಯವನ್ನು ತಾವು ಹುಟ್ಟುಹಾಕಬಾರದೆಂದು ನಾನು ತಮ್ಮ ಹತ್ತಿರ ಕೇಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು): ಈಗಾಗಲೇ ಸಾಕಷ್ಟು ಈ ವಿಚಾರದಲ್ಲಿ ಚರ್ಚೆಯಾಗಿರುವುದರಿಂದ ಈ ಬಗ್ಗೆ ಮೆಸೇಜ್ ಬೇರೆ ರೀತಿ ಹೋಗುವುದು ಬೇಡ. ಈಗ ಸರ್ಕಾರದವರು ಅಥವಾ ಶಾಸಕರು ಇವತ್ತು ಕಾನೂನಿನ ಚೌಕಟ್ಟಿನಲ್ಲಿ ಸರ್ವಪಕ್ಷಗಳನ್ನು ಕರೆದು ಈಗಾಗಲೇ ಸಾಕಷ್ಟು ಸಮಯವನ್ನು ಕೊಟ್ಟು ಸಂಪೂರ್ಣವಾದ ಮಾಹಿತಿಯನ್ನು ಪಡೆದ ನಂತರ ತೀರ್ಮಾನ ಮಾಡಬೇಕೆಂದು ನಿರ್ಧರಿಸಿರುವ ವಿಚಾರದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಸಾರ್ವಜನಿಕರೂ ಸಹ ಶಾಸಕರಲ್ಲಿ ಹಾಗೂ ಸರ್ಕಾರದಲ್ಲಿ ಬಹಳ ಭಿನ್ನಾಭಿಪ್ರಾಯವಿದೆ. ನಮಗೆ ಆಗಿರತಕ್ಕಂಥ ಅನ್ಯಾಯದ ಪರವಿದ್ದಾರೆ,

ವಿರೋಧವಾಗಿದ್ದಾರೆ ಎನ್ನತಕ್ಕಂಥ ರೀತಿ ಮೆಸೇಜ್ ಹೋಗುವ ಅವಶ್ಯಕತೆಯಿಲ್ಲ ಆದರೆ ಕಾನೂನಿನ ಚೌಕಟ್ಟಿನಲ್ಲಿ ಯಾವ ರೀತಿ ನಮ್ಮ ಪ್ರತಿಕ್ರಿಯೆಯನ್ನು, ನಮ್ಮ ರಕ್ಷಣೆಯನ್ನು ಮಾಡಬೇಕೆಂಬ ಬಗ್ಗೆ ಸರ್ಕಾರ ಚಿಂತನೆಯಲ್ಲಿದೆ. ಸರ್ವಪಕ್ಷಗಳ ಸಭೆಯನ್ನು ಕರೆದಿದೆ. ತಕ್ಷಣದಲ್ಲೇ ಮತ್ತೊಂದು ಸರ್ವಪಕ್ಷಗಳ ಸಭೆಯನ್ನು ಕರೆದು ಅಂತಿಮವಾದಂಥ ತೀರ್ಮಾನಕ್ಕೆ ನಾವು ಬರುತ್ತೇವೆ. ಇವತ್ತು ಕಾಂಗ್ರೆಸ್ ಪಕ್ಷದ ಬಹುತೇಕ ಸದಸ್ಯರು ಬಂದ್‌ಗೆ ಬೆಂಬಲವನ್ನು ಅಧಿಕೃತವಾಗಿ ಸೂಚಿಸಿದ್ದಾರೋ ಇಲ್ಲವೋ ಆದರೆ ನೂರಕ್ಕೆ ನೂರರಷ್ಟು ಸದಸ್ಯರು ಬರದೇ ಇರತಕ್ಕಂಥ ವಾತಾವರಣ ನಮಗೆ ಇಲ್ಲಿ ಎದುರಿಗೆ ಕಾಣುತ್ತಿದೆ ಆದರೆ ಸದನವನ್ನು ನಡೆಸಬೇಕು ಎಂಬುದರ ಬಗ್ಗೆ ಅವರ ಅಭಿಪ್ರಾಯವೂ ಬೇಕು. ಇವತ್ತು ನಾವು ನೋಡಿದಾಗ ಸಂಪೂರ್ಣವಾದ ರೀತಿಯಲ್ಲಿ ಅವರ ಸಹಕಾರವನ್ನು ನಾವು ಕಾಣುತ್ತಿಲ್ಲ ಆದರೆ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಈ ಕಾವೇರಿ ವಿಷಯದಲ್ಲಿ ಜನರ ವಿರೋಧಿ ಸರ್ಕಾರವಲ್ಲ. ಇವತ್ತು ಜನರಲ್ಲಿ ಏನು ಭಾವನೆ, ಆತಂಕ ಇದೆ ಆ ನಿಟ್ಟಿನಲ್ಲಿ ನಾವು ಯೋಚನೆ ಮಾಡಲಿಕ್ಕೆ ನಾವು ತಯಾರಿದ್ದೇವೆ. ಆದರೆ ಸರ್ಕಾರ ಕಾನೂನು ರೀತಿಯಲ್ಲಿ ನಾವು ಎಲ್ಲಾ ಮಾಹಿತಿಯನ್ನು ಪಡೆದು ಎಲ್ಲಾ ವಿರೋಧ ಪಕ್ಷಗಳ, ಹಿರಿಯ ತಜ್ಞರ, ಅಧಿಕಾರಿಗಳ ಸಲಹೆಯನ್ನು ಪಡೆದುಕೊಂಡು ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ತಯಾರಿದ್ದೇವೆ. ಹಾಗಾಗಿ ಇಂದಿನ ಸದನದಲ್ಲಿ ಪ್ರಶ್ನೋತ್ತರವನ್ನು ನಡೆಸುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ.

ಅಧ್ಯಕ್ಷರು: ಈಗ ಬಹಳ ಜನ ಮಾನ್ಯ ಸದಸ್ಯರು ಸದನದಲ್ಲಿ ಹಾಜರಿಲ್ಲ. ಇಲ್ಲಿ ಇರತಕ್ಕಂಥ ಸದಸ್ಯರಲ್ಲಿ ಬಹಳ ಜನ ಶಾಸಕರು ಈ ಸದನವನ್ನು ನಾಳೆಗೆ ಮುಂದೂಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಗೋವಿಂದ ಕಾರಜೋಳರವರು ಸಹ ಅವರ ಅಭಿಪ್ರಾಯವನ್ನು ತಿಳಿಸಿದ್ದಾರೆ. ಇವೆಲ್ಲವನ್ನು ಗಣನೆಗೆ ತೆಗೆದುಕೊಂಡು ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಬೆಳಿಗ್ಗೆ 11.45 ಗಂಟೆಗೆ ಮುಕ್ತಾಯಗೊಂಡು ಪುನ: ದಿನಾಂಕ 13.2.2007ರ ಬೆಳಿಗ್ಗೆ 11.00 ಗಂಟೆಗೆ ಸೇರುವುದಾಗಿ ನಿರ್ಧರಿಸಲಾಯಿತು.)